# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 100 |
| ಸದಸ್ಯರ ಹೆಸರು | ಶ್ರೀ ಸಿ.ಎನ್. ಮಂಜೇಗೌಡ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | 04-03-2025 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಕರ್ನಾಟಕ ಕೃಷಿ ಬೆಲೆ ಆಯೋಗ ತನ್ನ ವರದಿಯಲ್ಲಿ 26 ಬೆಳೆಗಳನ್ನು ರಾಜ್ಯದ ಪ್ರಮುಖ ಬೆಳೆಗಳೆಂದು ಗುರುತಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಹೌದು.<br>ಕರ್ನಾಟಕ ಕೃಷಿ ಬೆಲೆ ಆಯೋಗದ ವರದಿಯಲ್ಲಿ ಕೆಳಕಂಡ 26 ಬೆಳೆಗಳನ್ನು ರಾಜ್ಯದ ಪ್ರಮುಖ ಬೆಳೆಗಳೆಂದು ಗುರುತಿಸಲಾಗಿರುತ್ತದೆ:
<table>
<tr><th>ಕ್ರ. ಸಂ.</th><th>ಕೃಷಿ ಬೆಳೆಗಳು</th><th>ಕ್ರ. ಸಂ.</th><th>ತೋಟಗಾರಿಕಾ ಬೆಳೆಗಳು</th></tr>
<tr><td>1</td><td>ಭತ್ತ</td><td>14</td><td>ಮೆಣಸಿನಕಾಯಿ</td></tr>
<tr><td>2</td><td>ರಾಗಿ</td><td>15</td><td>ಟೊಮೆಟೊ</td></tr>
<tr><td>3</td><td>ಜೋಳ</td><td>16</td><td>ಈರುಳ್ಳಿ</td></tr>
<tr><td>4</td><td>ಮುಸುಕಿನ ಜೋಳ</td><td>17</td><td>ಆಲೂಗಡ್ಡೆ</td></tr>
<tr><td>5</td><td>ಸಜ್ಜೆ</td><td>18</td><td>ಬಾಳೆ</td></tr>
<tr><td>6</td><td>ತೊಗರಿ</td><td>19</td><td>ದ್ರಾಕ್ಷಿ</td></tr>
<tr><td>7</td><td>ಹೆಸರು</td><td>20</td><td>ದಾಳಿಂಬೆ</td></tr>
<tr><td>8</td><td>ಉದ್ದು</td><td>21</td><td>ಮಾವು</td></tr>
<tr><td>9</td><td>ಕಡಲೆ</td><td>22</td><td>ತೆಂಗು</td></tr>
<tr><td>10</td><td>ಶೇಂಗಾ</td><td>23</td><td>ಅಡಕೆ</td></tr>
<tr><td>11</td><td>ಸೋಯಾಅವರೆ</td><td>24</td><td>ಶುಂಠಿ</td></tr>
<tr><td>12</td><td>ಸೂರ್ಯಕಾಂತಿ</td><td>25</td><td>ಅರಿಶಿಣ</td></tr>
<tr><td>13</td><td>ಹತ್ತಿ</td><td>26</td><td>ಕರಿಮೆಣಸು</td></tr>
</table></td></tr>
<tr><td>(ಆ)</td><td>ಕೇಂದ್ರ ಸರ್ಕಾರ ಕನಿಷ್ಠ ಬೆಂಬಲ ಬೆಲೆ ಘೋಷಿಸಿದ ಬೆಳೆಗಳನ್ನು ಹೊರತುಪಡಿಸಿ ಎಷ್ಟು ಬೆಳೆಗಳಿಗೆ ರಾಜ್ಯ ಸರ್ಕಾರ ಬೆಂಬಲ ಬೆಲೆ ಘೋಷಿಸಲು ಕ್ರಮ ಕೈಗೊಂಡಿದೆ.</td><td>ಕೇಂದ್ರ ಸರ್ಕಾರವು ಪ್ರಮುಖ ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳಿಗೆ ಮುಂಗಾರು ಹಾಗೂ ಹಿಂಗಾರು ಹಂಗಾಮಿನ ಪೂರ್ವದಲ್ಲಿ ಬೆಂಬಲ ಬೆಲೆಯನ್ನು ಘೋಷಿಸುತ್ತದೆ (ಪ್ರತಿ ಲಗತ್ತಿಸಿದೆ)<br><br>ಇವುಗಳನ್ನು ಹೊರತುಪಡಿಸಿ ಇತರೆ ಉತ್ಪನ್ನಗಳ ಧಾರಣೆ ಮಾರುಕಟ್ಟೆಗಳಲ್ಲಿ ಕುಸಿತಗೊಂಡ ಸಂದರ್ಭಗಳಲ್ಲಿ ಕೃಷಿ ಮತ್ತು ತೋಟಗಾರಿಕಾ ಉತ್ಪನ್ನಗಳ ಬೆಲೆ ಸ್ಥಿರೀಕರಣ ಸಚಿವ ಸಂಪುಟ ಉಪ ಸಮಿತಿಯ ತೀರ್ಮಾನದಂತೆ ಉತ್ಪಾದನಾ ವೆಚ್ಚದ ಆಧಾರದ ಮೇಲೆ ಬೆಂಬಲ ಬೆಲೆ ನಿಗದಿಪಡಿಸಿ ಖರೀದಿಸಲು ಕ್ರಮ ಕೈಗೊಳ್ಳಲಾಗುತ್ತದೆ.</td></tr>
</table>

| | | |
|---|---|---|
| (ಇ) | ರಾಜ್ಯದ ಪ್ರಮುಖ ಬೆಳೆಗಳಲ್ಲಿ ಒಂದಾದ ದ್ರಾಕ್ಷಿ, ಮಾವು, ಬಾಳೆ, ಈರುಳ್ಳಿ ಸೇರಿದಂತೆ ತೋಟಗಾರಿಕಾ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ಘೋಷಿಸುವ ಉದ್ದೇಶ ಸರ್ಕಾರಕ್ಕಿದೆಯೇ? | ಹೌದು.<br><br>ರಾಜ್ಯದ ಪ್ರಮುಖ ಬೆಳೆಗಳಲ್ಲಿ ಒಂದಾದ ದ್ರಾಕ್ಷಿ, ಮಾವು, ಬಾಳೆ, ಈರುಳ್ಳಿ ಸೇರಿದಂತೆ ತೋಟಗಾರಿಕಾ ಬೆಳೆಗಳಿಗೂ ಸಹ ಬೆಂಬಲ ಬೆಲೆಯನ್ನು ಘೋಷಿಸಲು ಕೃಷಿ ಬೆಲೆ ಆಯೋಗದ ವತಿಯಿಂದ ಉತ್ಪನ್ನಗಳ ಉತ್ಪಾದನಾ ವೆಚ್ಚದ ಆಧಾರದ ಮೇಲೆ ಬೆಂಬಲ ಬೆಲೆ ನಿಗದಿಪಡಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಕ್ರಮವಹಿಸಲಾಗುತ್ತಿದೆ. |

ಸಂಖ್ಯೆ: AGRI/55/ACT/2025

(ಎನ್. ಚಲುವರಾಯಸ್ವಾಮಿ)
ಕೃಷಿ ಸಚಿವರು




ಕರ್ನಾಟಕ ಸರ್ಕಾರ


ಕೃಷಿ ಮಾರಾಟ ಇಲಾಖೆ

ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ



# ಕನಿಷ್ಠ ಬೆಂಬಲ ಬೆಲೆ ಯೋಜನೆ

2024-25 ನೇ ಸಾಲಿನ ಮುಂಗಾರು ಮತ್ತು ಹಿಂಗಾರು ಹಂಗಾಮಿಗಾಗಿ ಎಫ್.ಎ.ಕ್ಯೂ. ಗುಣಮಟ್ಟದ ಕೃಷಿ ಉತ್ಪನ್ನಗಳಿಗೆ ಭಾರತ ಸರ್ಕಾರವು ಘೋಷಿಸಿರುವ ಬೆಂಬಲ ಬೆಲೆಗಳ ವಿವರಗಳು



| ಕ್ರ.ಸಂ. | ಎಫ್.ಎ.ಕ್ಯೂ ಗುಣಮಟ್ಟದ ಉತ್ಪನ್ನಗಳು | ಪ್ರಭೇದ | 2024-25ನೇ ಸಾಲಿಗೆ ಕನಿಷ್ಠ ಬೆಂಬಲ ಬೆಲೆ ಪ್ರತಿ ಕ್ವಿಂಟಾಲ್‌ಗೆ (ರೂ. ಗಳಲ್ಲಿ) |
|---|---|---|---|
| 01 | ಭತ್ತ | ಸಾಮಾನ್ಯ | 2,300 |
| | | ಗ್ರೇಡ್ ಎ | 2,320 |
| 02 | ಜೋಳ | ಹೈಬ್ರೀಡ್ | 3,371 |
| | | ಮಾಲ್ದಂಡಿ | 3,421 |
| 03 | ಸಜ್ಜೆ | ಎಫ್.ಎ.ಕ್ಯೂ | 2,625 |
| 04 | ರಾಗಿ | ಎಫ್.ಎ.ಕ್ಯೂ | 4,290 |
| 05 | ಮೆಕ್ಕೆಜೋಳ | ಎಫ್.ಎ.ಕ್ಯೂ | 2,225 |
| 06 | ತೊಗರಿ | ಎಫ್.ಎ.ಕ್ಯೂ | 7,550 |
| 07 | ಹೆಸರು | ಎಫ್.ಎ.ಕ್ಯೂ | 8,682 |
| 08 | ಉದ್ದು | ಎಫ್.ಎ.ಕ್ಯೂ | 7,400 |
| 09 | ಶೇಂಗಾ (ಸಿಪ್ಪೆ ಸಹಿತ) | ಎಫ್.ಎ.ಕ್ಯೂ | 6,783 |
| 10 | ಸೂರ್ಯಕಾಂತಿ | ಎಫ್.ಎ.ಕ್ಯೂ | 7,280 |
| 11 | ಸೋಯಾಬೀನ್ (ಹಳದಿ) | ಎಫ್.ಎ.ಕ್ಯೂ | 4,892 |
| 12 | ಎಳ್ಳು | ಎಫ್.ಎ.ಕ್ಯೂ | 9,267 |
| 13 | ಹುಚ್ಚೆಳ್ಳು | ಎಫ್.ಎ.ಕ್ಯೂ | 8,717 |
| 14 | ಹತ್ತಿ | ಮಧ್ಯಮ ಎಳೆ | 7,121 |
| | | ಉದ್ದನೆಯ ಎಳೆ | 7,521 |
| 15 | ಕುಸುಬೆ | ಎಫ್.ಎ.ಕ್ಯೂ | 5,940 |
| 16 | ಕಡಲೆ | ಎಫ್.ಎ.ಕ್ಯೂ | 5,650 |

ಪ್ರಕಟಣೆ: ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ

ನಂ. 16, 2ನೇ ರಾಜಭವನ ರಸ್ತೆ, ಬೆಂಗಳೂರು – 560001

ದೂರವಾಣಿ ಸಂಖ್ಯೆ: 080-22867369, ಇ-ಮೇಲ್: cgmksamb@gmail.com

ವೆಬ್‌ಸೈಟ್: www.krishimaratavahini.karnataka.gov.in

**ದೈನಂದಿನ ಕೃಷಿ ಉತ್ಪನ್ನಗಳ ಬೆಲೆಗಳ ಮಾಹಿತಿಗಾಗಿ ಉಚಿತ ದೂರವಾಣಿ ಸಂಖ್ಯೆ: 1800 425 1552 ಗೆ ಕರೆ ಮಾಡಿ**

Generated from eOffice by RANJITHA V, CO-SO(RV), SECTION OFFICER, COOPERATION SECRETARIAT on 05/03/2025 03:22 PM